ದಾಸರೆಂದರೆ ಪುರಂದರ ದಾಸರಯ್ಯ

ದಾಸರೆಂದರೆ ಪುರಂದರ ದಾಸರಯ್ಯ | ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವಂಥ |

ಗ್ರಾಸಕಿಲ್ಲದೆ ಹೋಗಿ ಪರರ ಮನೆಗಳಹೊಕ್ಕು | ದಾಸನೆಂದು ತುಳಸಿ ಮಾಲೆ ಧರಿಸಿ

ಬ್ಯಾಸರಿಲ್ಲದೆ ಅವರ ಕಾಡಿಬೇಡಿ ಬಳಲಿಸುತ | ಕಾಸುಗೊಳಿಸುವ ಪುರುಷ ಹರಿದಾಸನೇ

ಢಂಬಕದಿ ಹರಿಸ್ಮರಣೆ ಮಾಡಿ ಜನರಾ ಮುಂದೆ | ಸಂಭ್ರಮದಿ ತಾನುಂಬೋ ಊಟಬಯಸಿ

ಅಂಬುಜೋದ್ಭವ ಪಿತನ ಆಗಮಗಳರಿಯದೆ | ತಂಬೂರಿ ಮೀಟಲವ ಹರಿದಾಸನೇ

ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ | ಪ್ರಿಯದಲಿ ತಾನೊಂದುಕೊಡದೆ ಲೋಭಿ

ಮಾಯಿಸಂಸಾರದಲಿ ಮಮತೆಹೆಚ್ಚಾಗಿಟ್ಟು | ಗಾಯನವ ಮಾಡಲವ ಹರಿದಾಸನೇ

ಪಾತಕಾರನಂತೆ ಪದಗಳನೆ ಪೇಳುತ್ತ | ಕೂಟ ಜನರ ಮನವ ಸಂತೋಷಗೊಳಿಸಿ

ಗೂಟನಾಮಗಳಚ್ಚಿಕೊಂಡಿರಿಯ ತಾನೆನಿಸಿ | ತೂಟಕವ ಮಾಡಲವ ಹರಿದಾಸನೇ

ನೀತಿಯಲ್ಲವನರಿತು ನಿಗಮ ವೇದ್ಯನ ನಿತ್ಯ | ವಾತಸುತನಲ್ಲಿಹನ ವರ್ಣಿಸುತಲಿ

ಗೇತನರ್ತನದಿಂದ ಕೃಷ್ಣನ್ನ ಪೂಜಿಸುವ | ಪೂತಾತ್ಮ ಪುರಂದರ ದಾಸರಿವರಯ್ಯ